ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 667/2025

ಚಾಸಾ: 7 ಪ್ರಾಸಾ:3

ದಿನಾಂಕ: 09.12.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಡಾ. ಶ್ರೀಕೃಷ್ಣಾನಂದ ಸಾಗರ್ |
| ತಂದೆಯ ಹೆಸರು | : | ರಮೇಶ್ ಭಟ್ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ವೈದ್ಯರು |
| ವಾಸ ಸ್ಥಳ | : | ಮಂಗಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ಜನವರಿ 2025 ರಿಂದ ಜೂನ್ 2025ರವರೆಗೆ ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 17-03-2025 ರಂದು ಬೆಳಿಗ್ಗೆ 9 ಗಂಟೆಗೆ ಪ್ರಾಸಾ-1ರವರು ದಿ: 15-03-2025ರಂದು ಹಲ್ಲೆಯಾದ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ದಾಖಲಾಗಿದ್ದು, ಅವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಬೆನ್ನಿನ ಕೆಳ ಹಿಂಭಾಗದಲ್ಲಿ ಮುಟ್ಟಿದರೆ ನೋವು ಕಂಡು ಬಂದಿರುತ್ತದೆ.
2. ಬಲಕಾಲಿನಲ್ಲಿ ನೋವು ಕಂಡು ಬಂದಿರುತ್ತದೆ.

ನನ್ನ ಅಭಿಪ್ರಾಯದಲ್ಲಿ ಮೇಲಿನ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದ್ರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಸ್ ಜಿ ಎಸ್ ರವರಿಂದ:**

ಗಾಯಾಳುವಿನ ಮೇಲೆ ಯಾವುದೇ ಗಾಯಗಳು ಕಂಡು ಬಂದಿರುವುದಿಲ್ಲ. ಆ ವೇಳೆಗೆ ಚಾಸಾ-1 ರವರಿಗೆ 65 ವರ್ಷವಾಗಿತ್ತು. ಆತನ ಉದ್ಯೋಗದ ಬಗ್ಗೆ ತಿಳಿದಿಲ್ಲ. ವಯಸ್ಸಾದವರಿಗೆ ಬೆನ್ನು ಮತ್ತು ಕಾಲು ನೋವು ಬರುವುದು ಸಹಜ ಎಂದರೆ ಸರಿ. ನಿಪಿ-6 ರಲ್ಲಿ ಗುರುತಿಸಿರುವ ನೋವುಗಳು ಆ ರೀತಿ ಸಂಭವಿಸಿರುವ ಸಾಧ್ಯತೆ ಇರುತ್ತದೆ. ಅದು ಸಹಜವಾಗಿ ಬಂದಿರುವ ನೋವು ಎಂದರೆ ಇರಬಹುದು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**